<u>**ಸಾಕ್ಷಿಯನ್ನು ದಿನಾಂಕಃ 13.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಎಸ್, ವಕೀಲರಿಂದಃ**</u>

ಪ್ರತಿವಾದಿಗಳು ನನಗೆ ಪರಿಚಯವಿದ್ದು, ನಮ್ಮ ಗ್ರಾಮದವರೇ ಆಗಿರುತ್ತಾರೆ. ಪ್ರತಿವಾದಿಗಳ ತಂದೆ ಪುಟ್ಟಸ್ವಾಮಿ ನನಗೆ ಗೊತ್ತಿರುತ್ತಾರೆ. ಪ್ರತಿವಾದಿಗಳ ತಾತ ನಂಜಯ್ಯ @ ಮರಿನಂಜಯ್ಯ ನನಗೆ ಗೊತ್ತಿರುತ್ತಾರೆ. ಪ್ರತಿವಾದಿಗಳ ತಂದೆ ಮತ್ತು ತಾತ ಮೃತಪಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳ ತಂದೆ ಮೃತಪಟ್ಟು ಸುಮಾರು 20-25 ವರ್ಷಗಳಾಗಿರಬಹುದಾ ಎಂದರೆ ನನಗೆ ನೆನಪಿಲ್ಲ. ದಾವಾ ತಪಶೀಲು ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿಗಳ ಹೆಸರಿನಲ್ಲಿದ್ದುದರಿಂದ, ಈ ದಾವೆ ಸಲ್ಲಿಸಿರುತ್ತೇನೆ. ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿಗಳ ಹೆಸರು ಸುಮಾರು 20 ವರ್ಷಗಳಿಂದೀಚೆಗೆ ದಾಖಲಾಗಿರುತ್ತದೆ. 1977-78 ರಿಂದಲೂ ನಿಪಿ-1 ರಿಂದ 6 ರಲ್ಲಿ ಪ್ರತಿವಾದಿಗಳ ತಂದೆಯ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ಈ ದಾವೆ ದಾಖಲಿಸಿರುವವರೆಗೂ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿಗಳ ತಂದೆಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಏಕಪಕ್ಷೀಯಾ ಡಿಕ್ರಿಯ ಆದೇಶದ ವಿರುದ್ಧ ಪ್ರತಿವಾದಿಗಳು ಹಿರಿಯ ದಿವಾನಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಆರ್.ಎ 16/2013 ರಂತೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯನ್ನು ಮಾನ್ಯ ನ್ಯಾಯಾಲಯವು ಪುರಸ್ಕರಿಸಿ, ಏಪಪಕ್ಷೀಯಾ ಡಿಕ್ರಿಯನ್ನು ರದ್ದುಗೊಳಿಸಿ, ಪ್ರತಿವಾದಿಗಳಿಗೆ ಲಿಖಿತ ಹೇಳಿಕೆ ಸಲ್ಲಿಸಲು ಅವಕಾಶ ನೀಡಿ ಸಾಕ್ಷ್ಯ ಮಂಡಿಸಲು ಅವಕಾಶ ನೀಡಿರುತ್ತದೆ ಎಂದರೆ ಸರಿ.

ಏಕಪಕ್ಷೀಯಾ ಡಿಕ್ರಿಯಾದ ನಂತರ ಮೇಲ್ಮನವಿ ಬಾಕಿಯಿರುವಾಗ ನಾನು ತಹಶೀಲ್ದಾರ್ ಕಛೇರಿಗೆ ಅರ್ಜಿ ಸಲ್ಲಿಸಿ, ನನ್ನ ಹೆಸರಿಗೆ ಕಂದಾಯ ದಾಖಲೆಗಳನ್ನು

ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ಹಿರಿಯ ದಿವಾನಿ ನ್ಯಾಯಾಧೀಶರ ನ್ಯಾಯಾಲಯವು ಮಾಡಿದ ಆದೇಶದ ವಿರುದ್ಧ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಈ ದಾವೆಯಲ್ಲಿ ದಿನಾಂಕ 19.03.2011 ರಲ್ಲಿ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ಸಲ್ಲಿಸಿದ್ದೆ ಎಂದರೆ ಸರಿ. ನಿಪಿ-28 ನ್ನು ನನ್ನ ಮತ್ತು ನನ್ನ ತಂದೆ ಹೇಳಿಕೆಯಂತೆ ತಯಾರಿಸಿರುತ್ತಾರೆ ಎಂದರೆ ಸರಿ. ನಿಪಿ-28 ರಲ್ಲಿ ಬರೆದಿರುವ ವಿಚಾರಗಳು ಸರಿಯಾಗಿರುತ್ತವೆ. ನನ್ನ ತಂದೆಯ ಹೆಸರು ಸಿದ್ದಲಿಂಗ ನಾಯಕ @ ಯಳವನಾಯಕ ಆಗಿರುತ್ತದೆ. ನನ್ನ ತಾತನ ಹೆಸರು ಹೊಟ್ಟೆಸಿದ್ದನಾಯಕ ಎಂದು ನಿಪಿ-28 ರಲ್ಲಿ ಬರೆದಿರುತ್ತಾರೆ ಎಂದರೆ ಸರಿ. ನಿಪಿ-28 ರಲ್ಲಿ ನಮೂದಿಸಿರುವಂತೆ ಹೊಟ್ಟೆಸಿದ್ದನಾಯಕ ರವರ ತಂದೆಯ ಹೆಸರು ಸಿದ್ದಲಿಂಗ ಎಂದರೆ ಸರಿ. ಈ ದಾವೆಯಲ್ಲಿ ದಾವಾ ಸ್ವತ್ತು ನನ್ನ ಸ್ವಾಧೀನದಲ್ಲಿದ್ದು, ಮಾಲೀಕತ್ವ ಹೊಂದಿರುತ್ತೇನೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತು ನಮ್ಮ ತಾತನ ಮೂಲಕ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿರುತ್ತದೆ. ವಾದಪತ್ರದಲ್ಲಿ ನಮೂದಿಸಿರುವಂತೆ ದಾವಾ ಸ್ವತ್ತು ಹಿಸ್ಸಾ ಪಟ್ಟಿಯಂತೆ ನನ್ನ ಹೆಸರಿಗೆ ಬಂದಿರುತ್ತದೆ. ನನ್ನ ತಂದೆ ಮೃತಪಟ್ಟು ಸುಮಾರು 20-25 ವರ್ಷಗಳಾಗಿರಬಹುದು. ಸುಮಾರು 20-30 ವರ್ಷಗಳಿಂದ ಚಿನ್ನಂಬಳ್ಳಿ ಸಹಕಾರ ಸಂಘದಲ್ಲಿ ಸದಸ್ಯನಾಗಿದ್ದು, ಸಂಘದ ಅಧ್ಯಕ್ಷನಾಗಿಯೂ ಕೂಡ ಆಯ್ಕೆಯಾಗಿದ್ದೆ. ಅದೇ ರೀತಿ ಪ್ರತಿವಾದಿಗಳ ತಂದೆಯು ಕೂಡ ಸದರಿ ಸಹಕಾರ ಸಂಘದ ಸದಸ್ಯರಾಗಿದ್ದರು ಎಂದರೆ ಸರಿ. ಪ್ರತಿವಾದಿಗಳ ತಂದೆ ಈ ಮೇಲೆ ಹೇಳಿದ ಸಹಕಾರ ಸಂಘದ ಸದಸ್ಯರಾಗಿದ್ದ ಸಮಯದಲ್ಲಿ ದಾವಾ ಸ್ವತ್ತಿನ ಸರ್ವೆ ನಂಬರಿಗೆ ಸಂಬಂಧಿಸಿದಂತೆ ಸಾಲ ಪಡೆದಿದ್ದರು ಎಂದರೆ ಈ ಸರ್ವೆ ನಂಬರಿಗೆ ಪಡೆದಿರಲಿಲ್ಲ, ಬೇರೆ ಆಸ್ತಿಗೆ ಪಡೆದಿದ್ದರು. ಈ ದಾವೆ ದಾಖಲಿಸುವ ಪೂರ್ವದಲ್ಲಿ ದಾವಾ ಸ್ವತ್ತಿನ ಮೇಲೆ ಬ್ಯಾಂಕ್

ಅಥವಾ ಸಹಕಾರ ಸಂಘದಲ್ಲಿ ಯಾವುದೇ ಸಾಲ-ಸೌಲಭ್ಯ ಪಡೆದಿಲ್ಲ. ಈಗ ನನಗೆ ತೋರಿಸುತ್ತಿರುವ 1995-96 ನೇ ಸಾಲಿನ ಹಕ್ಕು ಬದಲಾವಣೆಯಲ್ಲಿ ನಮೂದಿಸಿರುವಂತೆ "ಪುಟ್ಟಸ್ವಾಮಿ S/o ಮರಿನಂಜಯ್ಯ, ಕಾರ್ಯ ಗ್ರಾಮ ಇವರಿಂದ VSSSN, ಚಿನ್ನಂಬಳ್ಳಿ ಇವರಿಗೆ ಆಧಾರ 8000/- ರೂ" ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಹಕ್ಕು ಬದಲಾವಣೆ ವಹಿಯ ದೃಡೀಕೃತ ಪ್ರತಿಯನ್ನು ನೋಡಿ ಒಪ್ಪಿ ಗುರುತಿಸಿದ್ದರಿಂದ, ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಅದೇ ರೀತಿ ಈಗ ನನಗೆ ತೋರಿಸುತ್ತಿರುವ 11 ಗಣಕೀಕೃತ ಪಹಣಿ ಪತ್ರಿಕೆಗಳಲ್ಲೂ ಪುಟ್ಟಸ್ವಾಮಿ ಬಿನ್ ಮರಿನಂಜಯ್ಯ VSSSN, ಚಿನ್ನಂಬಳ್ಳಿ ಇವರಿಗೆ ಆಧಾರ 8000/- ಎಂದು ದಾಖಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು 11 ಪಹಣಿ ಪತ್ರಿಕೆಗಳಲ್ಲಿರುವ ಈ ಮೇಲಿನ ನಮೂದನ್ನು ನೋಡಿ ಒಪ್ಪಿ ಗುರುತಿಸಿದ್ದರಿಂದ, ಅವುಗಳನ್ನು ಕ್ರಮವಾಗಿ ನಿಡಿ-2 ರಿಂದ 12 ಎಂದು ಗುರುತಿಸಲಾಯಿತು. ನಿಪಿ-4 ಮತ್ತು 5 ರಲ್ಲಿ ಕೂಡ ಪುಟ್ಟಸ್ವಾಮಿ ಬಿನ್ ಮರಿನಂಜಯ್ಯ VSSSN, ಚಿನ್ನಂಬಳ್ಳಿ ಇವರಿಗೆ ಆಧಾರ 8000/- ಎಂದು ನಮೂದಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಗಳ ತಂದೆ ನಾನು ಸಂಘದ ಸದಸ್ಯನಾಗಿದ್ದ ಬ್ಯಾಂಕಿನಲ್ಲಿಯೇ ಸಾಲ ಪಡೆದಿರುತ್ತಾರೆ ಎಂದರೆ ಅದು ತಪ್ಪಾಗಿ ನಮೂದಾಗಿರುತ್ತದೆ. ಪ್ರತಿವಾದಿಗಳ ತಂದೆ ದಾವಾ ಸ್ವತ್ತಿನ ಮೇಲೆ ಸಾಲ ಪಡೆದ ವಿಚಾರ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಕುಟುಂಬದಲ್ಲಿ ಆದ ವಿಭಾಗದಂತೆ ಪ್ರತಿವಾದಿಗಳು ಹಿಂದಿನಿಂದಲೂ ಇಲ್ಲಿಯವರೆಗೂ ಸ್ವಾಧೀನ ಹೊಂದಿ, ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸಲ್ಲಿಸುವ ಪೂರ್ವದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ಕಟ್ಟಿರುತ್ತೇನೆ. ಆ ರೀತಿ ಕಂದಾಯ ಪಾವತಿಸಿರುತ್ತೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ದಾವೆ

ಸಲ್ಲಿಸುವ ಪೂರ್ವದಲ್ಲಿ ಯಾವುದೇ ಕಂದಾಯ ಪಾವತಿಸಿರುವುದಿಲ್ಲವಾದ್ದರಿಂದ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ನಾನು ಸರ್ವೆ ನಂ.228 ರ ಆಸ್ತಿಗೆ ಸಂಬಂಧಿಸಿದಂತೆ VSSSN ಬ್ಯಾಂಕಿಗೆ ಆಧಾರ ಮಾಡಿ ಸಾಲ ಪಡೆದಿರುತ್ತೇನೆಂದು ನಮೂದಿಸಲಾಗಿದೆ ಎಂದರೆ ಸರಿ.

**ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**
**ನಂಜನಗೂಡು.**